# ತಿರುಪ್ಪಾಣಾಳ್ವಾರ್

ಪುಷ್ಪ ಶೇಷಾದ್ರಿ

ಭಕ್ತರಿಗೆ ಜಾತಿಯಿಲ್ಲ, ಅವರದೇ ಒಂದು ವಿಶೇಷ ಜಾತಿ ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಭಗವಂತನು ನೋಡು ವುದು ನಮ್ಮ ಹೃದಯವನ್ನು, ಜಾತಿಯನ್ನಲ್ಲ. ಪಂಚಮ ವರ್ಗಕ್ಕೆ ಸೇರಿದ ಶ್ರೀತಿರುಪ್ಪಾಣಾಳ್ವಾರ್ ತಮ್ಮ ಪವಿತ್ರ ಜೀವನದಿಂದ, ಅಹೇತುಕ ಭಕ್ತಿಯಿಂದ ಸಂತಶ್ರೇಷ್ಠರಾದರು. ಅವರ ಕಿರುಪರಿಚಯವನ್ನಿತ್ತಿರುವ ಶ್ರೀಮತಿ ಪುಷ್ಪ ಶೇಷಾದ್ರಿ ಯವರು ಮೈಸೂರು ರಾಮಕೃಷ್ಣ ಆಶ್ರಮದ ಭಕ್ತರು.

**ಕರ್ನಾಟಕದಲ್ಲಿ** ಹರಿದಾಸರು, ಶಿವಶರಣರು ಇದ್ದಂತೆ, ತಮಿಳು ನಾಡಿನಲ್ಲೂ ಸಹ ಹರಿದಾಸರು, ಹರಿಶರಣರು ಇದ್ದರು. ಇವರನ್ನು ಅಲ್ಲಿ 'ಆಳ್ವಾರ್' ಎಂದು ಕರೆಯುತ್ತಿದ್ದರು. ಸಂಸ್ಕೃತದಲ್ಲಿ 'ದಿವ್ಯಸೂರಿ' ಎಂಬ ಪದವಿದೆ. ಅದರ ಅರ್ಥ ಆಧ್ಯಾತ್ಮಿಕ ಮಹಾಪುರುಷರು. ತಮಿಳು ಭಾಷೆಯಲ್ಲಿ ಆಳ್ವಾರರು ಎಂದರೆ ಆಧ್ಯಾತ್ಮಿಕ ಮಹಾಪುರುಷರು. 'ಆಳ್ವಾರ್' ಎಂಬುದರ ಶಾಬ್ದಿಕ ಅರ್ಥ ನೀರಿನಲ್ಲಿ ಮುಳುಗುವುದು ಎಂದು– ಅಂದರೆ ಭಗವಂತನ ಅನುಭವಸಾಗರದಲ್ಲಿ ಮುಳುಗಿದವರು ಎಂದು. ಈ ಆಳ್ವಾರ್‌ಗಳಲ್ಲಿ ಹನ್ನೆರಡು ಜನ ಪ್ರಮುಖರಾದ ಅನುಭಾವಿಗಳು. ಇವರೆಲ್ಲಾ ರಾಮಾನುಜಾಚಾರ್ಯರಿಗಿಂತ ಮುಂಚಿನವರು. **'ಸರ್ವೇ ಜನಾಃ ಸುಖಿನೋ ಭವಂತು'** ಎಂಬುದೇ ಈ ಆಳ್ವಾರರ ಧ್ಯೇಯ. ಭಗ ವಂತನ ಅಪಚಾರವಾದರೂ, ಭಗವದ್ ಭಕ್ತರ ಅಪಚಾರ ಎಂದೂ ಆಗಬಾರದು. ಈ ಆಳ್ವಾರ್‌ಗಳಲ್ಲಿ ಒಬ್ಬರಾದ ಹನ್ನೊಂದನೆ ಯವರೇ ತಿರುಪ್ಪಾಣಾಳ್ವಾರ್.



ಇವರು ತಮಿಳುನಾಡಿನ 'ಹರಿಜನ' ಆಶ್ರಯದಲ್ಲಿ ಅನಾಥ ಶಿಶುವಾಗಿ ಬೆಳೆದವರು. ಇವರಿಗೆ ದೈವದತ್ತ ಕಂಠ ಇದ್ದುದರಿಂದ ಚಿಕ್ಕ ವಯಸ್ಸಿನಿಂದಲೂ ದೇವರನ್ನು ಕುರಿತು ಭಾವ ಪರವಶರಾಗಿ ವೀಣೆಯೊಂದಿಗೆ ಹಾಡು ತ್ತಿದ್ದರು. ದೇವರ ಲೀಲೆಗಳನ್ನು ಹಾಡುತ್ತಾ-ಹಾಡುತ್ತಾ, ಸುತ್ತಲೂ ಏನು ನಡೆಯುತ್ತಿದೆ ಎಂಬುದನ್ನೇ ಮರೆತುಬಿಡುತ್ತಿದ್ದರು. ಅಷ್ಟು ತನ್ಮಯತೆ ಅವರಲ್ಲಿ. ಅವರು ಹುಚ್ಚರಂತೆ ವರ್ತಿಸುತ್ತಿದ್ದರು.

ಹೀಗೆ ಒಮ್ಮೆ ಕಾವೇರಿ ನದಿ ತೀರದಲ್ಲಿ ಶ್ರೀರಂಗನಾಥನ ದೇವಸ್ಥಾನದ ಎದುರಾಗಿ ಕುಳಿತು, ತಮ್ಮ ಹಾಡಿನ ಆರಾಧನೆಯನ್ನು ರಂಗನಾಥನಿಗೆ ಅರ್ಪಿಸುತ್ತಿದ್ದರು. ಅದೇ ವೇಳೆಗೆ ದೇವಸ್ಥಾನದ ಅರ್ಚಕರಾದ ಲೋಕಸಾರಂಗ ಮುನಿಗಳು ದೇವರ ಅಭಿಷೇಕಕ್ಕಾಗಿ ನೀರನ್ನು ತೆಗೆದುಕೊಂಡು ಹೋಗಲು ನದಿಗೆ ಬಂದರು. ಅಲ್ಲಿ ಕೀಳು ಜಾತಿಯವನು ಕುಳಿತು ಹಾಡುತ್ತಿದ್ದುದನ್ನು ಕಂಡು ಅವನನ್ನು ಕುರಿತು 'ಆ ಕಡೆ ಸರಿಯೋ!!' ಎಂದು ಮೂರು ನಾಲ್ಕು ಬಾರಿ ಕೂಗಿ ಹೇಳಿದರು. ಭಾವಾವೇಷದಿಂದ, ತಮ್ಮನ್ನು ದೇವರಿಗೆ ಅರ್ಪಿಸಿ ಹಾಡುತ್ತಿದ್ದ ಅವರಿಗೆ ಅರ್ಚಕರ ಕೂಗು ಕೇಳಿಸಲೇ ಇಲ್ಲ. ಅರ್ಚಕರು, ಕಲ್ಲು ಹೊಡೆದರು, ಕೆಟ್ಟದಾಗಿ ಬೈದರು. ಕೊನೆಗೆ ಎಚ್ಚರಗೊಂಡು, 'ತಪ್ಪಾಯಿತು, ನನ್ನನ್ನು ಹೊಡೆಯಬೇಡಿ, ಹೋಗುವೆ'ಎಂದು ಹೇಳುತ್ತ ತಿರುಪ್ಪಾಣಾಳ್ವಾರ್ ಅಲ್ಲಿಂದ ಓಡಿದರು.

ಇತ್ತ ಲೋಕಸಾರಂಗರು ಕೊಡದಲ್ಲಿ ಕಾವೇರಿನದಿಯಿಂದ ನೀರನ್ನು ಅಭಿಷೇಕಕ್ಕಾಗಿ ತುಂಬಿಕೊಂಡು, ದೇವಸ್ಥಾನದ ಬಾಗಿಲನ್ನು ತೆಗೆಯಲು ಬಂದರು. ಹೊರಗಡೆಯ ಬೀಗವನ್ನೇನೋ ತೆಗೆದದ್ದಾಯಿತು. ಆದರೆ ಬಾಗಿಲು ಒಳಗಡೆಯಿಂದ ಚಿಲುಕ ಹಾಕಿಕೊಂಡಂತೆ ಇತ್ತು. ಎಷ್ಟು ತಳ್ಳಿದರೂ ಬಾಗಿಲು ತೆರೆಯಲೇ ಇಲ್ಲ. ಯಾಕೆ ಹೀಗೆಂದು ಅರ್ಚಕರಿಗೆ ತಿಳಿಯಲಿಲ್ಲ. ಆ ವೇಳೆಗೆ ಉಳಿದ ಅರ್ಚಕ ರೆಲ್ಲಾ ಅಲ್ಲಿ ಸೇರಿದರು. ಎಷ್ಟು ಪ್ರಯತ್ನಿಸಿದರೂ ಯಾರಿಂದಲೂ ಬಾಗಿಲನ್ನು ತೆಗೆಯಲಾಗಲಿಲ್ಲ. ಎಲ್ಲರಿಗೂ ಚಿಂತೆಯಾಯಿತು. ಈಗ ಅಭಿಷೇಕದ ವೇಳೆ. ಬಾಗಿಲು ತೆರೆಯಲಾಗುತ್ತಿಲ್ಲ. ಏನು ಮಾಡುವು ದೆಂದು ಯಾರಿಗೂ ತೋಚುತ್ತಿಲ್ಲ. ತಮ್ಮಿಂದಲೇ ಏನಾದರೂ ದೈವಾಪರಾಧವಾಗಿರಬಹುದು, ಅದಕ್ಕೇ ಭಗವಂತನು ಕೋಪದಿಂದ ಬಾಗಿಲು ಮುಚ್ಚಿಕೊಂಡಿರಬಹುದು ಎಂದು ಲೋಕ ಸಾರಂಗರು ಭಾವಿಸಿದರು. ಕೈಜೋಡಿಸಿ, ಭಕ್ತಿಭಾವದಿಂದ ಕಣ್ಣೀರು ಸುರಿಸುತ್ತ ಅವರು ಶ್ರೀರಂಗನಾಥನನ್ನು ಪ್ರಾರ್ಥಿಸ ತೊಡಗಿದರು:' ಹೇ ಪ್ರಭು, ನಿನ್ನ ಈ ಸೇವಕನಿಂದ ಏನು ಅಪರಾಧವಾಯಿತು ಎಂದು ಹೇಳು.ಪ್ರಾಯಶ್ಚಿತ್ತವಾಗಿ ಏನೇ ಮಾಡಬೇಕಾದರೂ ಸಿದ್ಧನಿದ್ದೇನೆ.'

ಹೀಗೆ ಪ್ರಾರ್ಥಿಸುತ್ತಿರುವಾಗ ಒಳಗಡೆ ಯಿಂದ ಒಂದು ಇಂಪಾದ ಧ್ವನಿ ಕೇಳಿಸಿತು: 'ನನಗೆ ನೀನು ಕಲ್ಲು ಹೊಡೆದು ಘಾಸಿ ಮಾಡಿರುವೆ, ನಾನು ಬಾಗಿಲು ತೆಗೆಯು ವುದಿಲ್ಲ.' ಲೋಕಸಾರಂಗರು, 'ನಾನು ಯಾವಾಗ ನಿನಗೆ ಹೊಡೆದೆ ದೇವಾ?' ಎಂದು ಕೇಳಿದರು. 'ಕಾವೇರಿ ದಡದಲ್ಲಿ ಕುಳಿತು, ನನ್ನನ್ನು ಹಾಡಿ ಹೊಗಳುವುದ ರಲ್ಲಿ ತನ್ಮಯನಾಗಿದ್ದ ಪಂಚಮನಿಗೆ ನೀನು ಹೊಡೆಯಲಿಲ್ಲವೇ? ಅವನು ನನ್ನ ಭಕ್ತನಾದ್ದರಿಂದ, ಆ ಕಲ್ಲುಹೊಡೆತ ನನಗೇ ತಗುಲಿತು' ಎಂದು ಒಳಗಡೆಯಿಂದ ಧ್ವನಿ ಕೇಳಿಸಿತು. ಎಲ್ಲರಿಗೂ ಆಶ್ಚರ್ಯ!

'ತಪ್ಪಾಯಿತು, ದೇವಾ, ಹೌದು ನಾನು ಕಲ್ಲು ಹೊಡೆದೆ, ಆದರೆ ಅವನು ನಿನ್ನ ಭಕ್ತನೆಂದು ತಿಳಿಯಲಿಲ್ಲ. ಪಂಚಮನೆಂದು ಹೀನವಾಗಿ ನಡೆದುಕೊಂಡೆ. ಈ ತಪ್ಪಿಗೆ ಏನು ಪರಿಹಾರ? ಈಗ ಬಾಗಿಲು ತೆರೆಯಬೇಕಾದರೆ ಏನು ಮಾಡಬೇಕು? 'ಎಂದು ಬೇಡಿಕೊಂಡರು.

ಒಳಗಿನ ಧ್ವನಿ, 'ಆ ನನ್ನ ಭಕ್ತನನ್ನು ಹೆಗಲ ಮೇಲೆ ಹೊತ್ತು, ದೇವಸ್ಥಾನವನ್ನು ಮೂರುಬಾರಿ ಪ್ರದಕ್ಷಿಣೆ ಮಾಡಿದರೆ ಬಾಗಿಲು ತೆಗೆಯುವೆ' ಎಂದು ಕೇಳಿಸಿತು. ಈಗ ಎಲ್ಲರೂ ಕಾವೇರಿ ನದಿ ಕಡೆ ಧಾವಿಸಿದರು. ಇವರೆಲ್ಲಾ ಓಡಿ ಬರುತ್ತಿದ್ದುದನ್ನು ಕಂಡ ಪಂಚಮ, 'ಬೇಡಿ, ಹೊಡೆಯಬೇಡಿ, ನಾನಿಲ್ಲಿಂದ ಹೋಗುವೆ, ನಾನೇನೂ ಮಾಡಿಲ್ಲ, ನಾರಾಯಣ... ನಾರಾಯಣ..' ಎನ್ನುತ್ತ ಓಡಲು ಪ್ರಾರಂಭಿಸಿದ. ಕೊನೆಗೆ ಎಲ್ಲರೂ ಓಡಿಹೋಗಿ ಅವನನ್ನು ಹಿಡಿದರು.

'ಅಯ್ಯೋ ನಾನು ಪಂಚಮ, ನನ್ನನ್ನು ನೀವು ಮುಟ್ಟಬಾರದು' ಎಂದು ಅವನು ಚಡಪಡಿಸಿದನು. ಲೋಕಸಾರಂಗರು ನಡೆದಿದ್ದೆಲ್ಲವನ್ನೂ ಅವನಿಗೆ ವಿವರಿಸಿ ಹೇಳಿದರು. ಆ ಭಕ್ತ, 'ನೀವು ಹೊಡೆದ ಕಲ್ಲುಗಳು, ನನಗೆ ತಗಲಲೇ ಇಲ್ಲ. ದೇವರ ಕರುಣೆ ಮಾತ್ರದಿಂದ ಅವೆಲ್ಲವೂ ಮರಳಿನಲ್ಲೇ ಬಿದ್ದವು' ಎಂದಾಗ ಎಲ್ಲರೂ ತಬ್ಬಿಬ್ಬಾದರು. ಆಗ ಲೋಕಸಾರಂಗರು, 'ಜಾತಿ, ಹುಟ್ಟು, ಕುಲ ಎಲ್ಲ ಸಾಮಾನ್ಯ ಜನರಿಗೆ ಸಂಬಂಧಿಸಿದ್ದು. ಸಂಸ್ಕಾರವನ್ನು ಹೊತ್ತು ತಂದ ದೇಹಕ್ಕೆ ಮಾತ್ರವಲ್ಲದೇ ಆತ್ಮನಿಗೆ ಭೇದ-ಭಾವವಿಲ್ಲ. ಸರ್ವಜ್ಞನೂ, ಸರ್ವಶಕ್ತನೂ, ಸರ್ವಾತ್ಮನೂ ಆದ ಆ ರಂಗನಾಥನೇ ನಿನ್ನನ್ನು ಭಕ್ತನೆಂದು ಪರಿಗಣಿಸಿರುವನು. ದೇವರ ಭಕ್ತನಿಗೆ ಜಾತಿ, ಮತ, ಧರ್ಮ, ಕುಲವೆಂಬ ನಿರ್ಬಂಧವಿಲ್ಲವೆಂದು ನನಗಿಂದು ತಿಳಿಯಿತು' ಎಂದರು. ಪಂಚಮ ಎಷ್ಟು ಹೇಳಿದರೂ ಕೇಳದೇ ಬಲವಂತವಾಗಿ ಅವನನ್ನು ಎಲ್ಲರೂ ಸೇರಿ ಹೆಗಲಮೇಲೆ ಹೊತ್ತು ದೇವಸ್ಥಾನವನ್ನು ಮೂರು ಬಾರಿ ಪ್ರದಕ್ಷಿಣೆ ಮಾಡಿದ್ದೇ ತಡ, ಅದ್ಭುತ ರೀತಿಯಲ್ಲಿ, ತನಗೆ ತಾನೇ ದೇವಸ್ಥಾನದ ಬಾಗಿಲು ತೆಗೆದುಕೊಂಡಿತು.

ಅಂದಿನಿಂದ ಆ ಪಂಚಮನನ್ನು 'ತಿರುಪ್ಪಾಣಿ ಆಳ್ವಾರ್' ಎಂದು ಕರೆಯಲಾಯಿತು. ಲೋಕಸಾರಂಗ ಮುನಿಗಳು ಇವರನ್ನು ಹೊತ್ತುಕೊಂಡು ತಿರುಗಿದ್ದರಿಂದ ಇವರಿಗೆ 'ಮುನಿವಾಹನ' ಎಂಬ ಮತ್ತೊಂದು ಹೆಸರೂ ಪ್ರಾಪ್ತವಾಯಿತು.

---

ಹದಿನೈದು ವರ್ಷಗಳ ಹಿಂದೆ ಇಟಲಿಯ ಯುವಕ ಪೌಲೋ ಭಾರತಕ್ಕೆ ಬಂದನು—ಆಧ್ಯಾತ್ಮಿಕ ಅನ್ವೇಷಣೆಗಾಗಿ. ಆದರೆ ಭಾರತದ ಭೀಕರ ದಾರಿದ್ರ್ಯವನ್ನು ಕಂಡು ಅವನು ದಿಗ್ಭ್ರಾಂತನಾದ. ಇಂತಹ ದುಃಸ್ಥಿತಿಯಲ್ಲಿ ಜನರು ಜೀವಿಸುವುದಾದರೂ ಹೇಗೆ ಎಂಬುದೇ ಅವನಿಗೆ ಅರ್ಥವಾಗಲಿಲ್ಲ. ಇದರಿಂದ ಅವನು ಎಷ್ಟೊಂದು ವಿಚಲಿತನಾಗಿ ಬಿಟ್ಟನೆಂದರೆ ಅವನು ತನ್ನ ಬುದ್ಧಿಯ ಸ್ತಿಮಿತವನ್ನು ಕಳೆದುಕೊಂಡು ಕೊನೆಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡನು.



ಪೌಲೋನ ತಾಯಿ ಗೀನಾಳ ದುಃಖ ಹೇಳತೀರದು. ಆದರೆ ಆಕೆ ತನ್ನ ಬುದ್ಧಿಸ್ತಿಮಿತವನ್ನು ಕಳೆದುಕೊಳ್ಳಲಿಲ್ಲ. ವಸ್ತುಸ್ಥಿತಿಯನ್ನು ತಿಳಿಯುವ ಸಲುವಾಗಿ ತಾನೇ ಭಾರತಕ್ಕೆ ಬಂದಳು. ಇದು ಆಕೆಯ ಜೀವನವನ್ನು ಬದಲಾಯಿಸಿತು. ಅವಳು ಬಡವರ ಸೇವೆ ಮಾಡಬೇಕೆಂದು ನಿರ್ಧರಿಸಿದಳು. ಪ್ರತಿಯೊಂದು ಮಗುವೂ, ಪ್ರತಿಯೊಬ್ಬ ಬಡ ಬಾಲಕ ಬಾಲಕಿಯೂ ಅವಳಿಗೆ ಪೌಲೋನ ನೆನಪು ತರುತ್ತಿತ್ತು. ಎಲ್ಲರೂ ತನ್ನ ಮಕ್ಕಳೆಂದು ಭಾವಿಸತೊಡಗಿದಳು. ಅವಳು ತನ್ನ ಕೈಲಾದ ಧನಸಹಾಯ ಮಾಡತೊಡಗಿದಳು. ಅಷ್ಟೇ ಅಲ್ಲದೆ ಹಣ, ಔಷಧಿ, ಬಟ್ಟೆ ಇತ್ಯಾದಿಗಳನ್ನು ಸಂಗ್ರಹಿಸಿ ಭಾರತ, ಬಂಗ್ಲಾದೇಶ, ನೇಪಾಳ, ಬ್ರೆಜಿಲ್, ಬೋಸ್ನಿಯಾ ಮುಂತಾದ ದೇಶಗಳಿಗೆ—ಎಲ್ಲೆಲ್ಲಿ ಆವಶ್ಯಕವೊ ಅಲ್ಲಿಗೆಲ್ಲ ಕಳಿಸತೊಡಗಿದಳು. ಏಕೆಂದರೆ ಅವಳು ಎಲ್ಲೆಲ್ಲಿಯೂ ತನ್ನ ಪೌಲೋ ದುಃಖಿಸುತ್ತಿರುವುದನ್ನು ಕಂಡಳು.

ತಾಯಿ ಗೀನಾ ಈಗ ವೃದ್ಧೆಯಾಗಿರುವಳು. ಆರೋಗ್ಯವೂ ಸರಿಯಿಲ್ಲ. ಆದರೂ ತನ್ನ ಲಕ್ಷಾಂತರ ಮಕ್ಕಳನ್ನು ಸಂಧಿಸಲು ವಿವಿಧ ದೇಶಗಳಿಗೆ ಭೇಟಿ ನೀಡಲು ಇಷ್ಟಪಡುತ್ತಾಳೆ.

ಅವಳು ತನ್ನ ಹಾಸಿಗೆಯ ಪಕ್ಕದಲ್ಲಿ ಶ್ರೀಮಾತೆ ಶಾರದಾದೇವಿಯವರ ಭಾವಚಿತ್ರವನ್ನು ಇಟ್ಟುಕೊಂಡಿರುತ್ತಾಳೆ.

**(ವೇದಾಂತ ಕೇಸರಿ, ಡಿಸೆಂಬರ್,1999)**